## ವಾರ್ಡ್ ನಂ: 83 ಕಾಡುಗುಡಿ ವಾರ್ಡ್ ಕಮಿಟಿ ಸಭೆಯ ನಡುವಳಿಗಳು:-

ದಿನಾಂಕ: 21/11/2020 ರಂದು ಕಾಡುಗುಡಿ ವಾರ್ಡ್ ಸಂಖ್ಯೆ: 83 ರ ವ್ಯಾಪ್ತಿಯಲ್ಲಿ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂ: ಬಿ12(5)/ಪಿಆರ್/35/2020-21 ದಿನಾಂಕ: 21-09-2020 ಆದೇಶದಂತೆ ವಾರ್ಡ್ ಕಛೇರಿಯಲ್ಲಿ ಮಾನ್ಯ ವಾರ್ಡ್ ನೊಡಲ್ ಅಧಿಕಾರಿ, ರವರು ಸದಸ್ಯರು ಹಾಗೂ ಕಮಿಟಿಯ ಕಾರ್ಯದರ್ಶಿ ರವರ ಸಮಕ್ಷಮದಲ್ಲಿ ಸಭೆ ನಡೆಸಲಾಯಿತು.

ಈ ಸಭೆಯಲ್ಲಿ ಈ ಕೆಳಗೆ ತಿಳಿಸಿರುವ ಅಂಶಗಳನ್ನೊಳಗೊಂಡಂತೆ ವಾರ್ಡ್‌ನಲ್ಲಿ ಕಾರ್ಯನಿರ್ವಹಿಸಲು ಸಭೆಯಲ್ಲಿ ತಿರ್ಮಾನಿಸಲಾಯಿತು.

1. ಹಿಂದಿನ ಸಭೆಯಲ್ಲಿ(ದಿನಾಂಕ: 07-11-2020) ಚರ್ಚಿಸಲಾದ ವಿಷಯಗಳು ಮತ್ತು ದೂರುಗಳ ಬಗ್ಗೆ ಕೈಗೊಂಡಿರುವ ಕ್ರಮದ ಬಗ್ಗೆ ಚರ್ಚಿಸಲಾಯಿತು.

2. COVID-19 ಸಾಂಕ್ರಾಮಿಕ ರೋಗ ತಡೆಗಟ್ಟುವ ಸಲುವಾಗಿ 4 ತಂಡಗಳಲ್ಲಿ ವಿಂಗಡಿಸಿ ಮತ್ತು ಪಾಸಿಟಿವ್ ಬಂದಿರುವ ಕಡೆ ಕೋವಿಡ್ ಪರೀಕ್ಷೆಯನ್ನು ವಾರ್ಡ್ ವ್ಯಾಪ್ತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಮರ್ಪಕವಾಗಿ ಮಾಡುವುದು, ಹಾಗೂ ಕೋವಿಡ್ ಪಾಸಿಟಿವ್ ಬಂದಿರುವ ಸುತ್ತ-ಮುತ್ತ ಪ್ರದೇಶಗಳಲ್ಲಿ ಸ್ಯಾನಿಟೈಸರ್ ಮತ್ತು ಔಷದಿಯನ್ನು ಸಿಂಪಡಣೆ ಕಾರ್ಯವನ್ನು ಸಮರ್ಪಕವಾಗಿ ವಾರ್ಡ್ ವ್ಯಾಪ್ತಿಯಲ್ಲಿ ನಿರ್ವಹಿಸಲಾಗುತ್ತಿರುವುದು ಕಂಡು ಬಂದಿರುತ್ತದೆ, ಕೋವಿಡ್ ಸಂಬಂದಿಸಿದಂತೆ ವಾರ್ಡ್ ವ್ಯಾಪ್ತಿಯಲ್ಲಿ ಯಾವುದೇ ದೂರು ಬಂದಿರುವುದಿಲ್ಲ, ಇದೆ ರೀತಿಯಾಗಿ ಕೆಲಸವನ್ನು ಮುಂದುವರೆಸಲು ವಾರ್ಡ್ ನೊಡಲ್ ಅಧಿಕಾರಿ, ರವರು ಸದಸ್ಯರು ಹಾಗೂ ಕಮಿಟಿಯ ಕಾರ್ಯದರ್ಶಿಗಳು ತಿರ್ಮಾನಿಸಿದರು.

   ಕ್ರಮ: ಸಹಾಯಕ ಅಭಿಯಂತರು/ಕಂದಾಯ ಪರಿವೀಕ್ಷಕರು/ಕಿರಿಯ/ ಕಿರಿಯ ಆರೋಗ್ಯ ಪರಿವೀಕ್ಷಕರು

3. ಕಾಡುಗುಡಿ ವಾರ್ಡ್ ನಂ; 83 ರಲ್ಲಿ ಔಷದಿ ಸಂಬಂದಿತ ಮ್ಯಾನ್ಯೂಯಲ್ ಸ್ಪ್ರೇಯಿಂಗ್, ಆಟೋ ಸ್ಪ್ರೇಯಿಂಗ್ ಫಾಗಿಂಗ್ ಕೆಲಸ ಕಾರ್ಯಗಳು ಸಮರ್ಪಕವಾಗಿ ನಿರ್ವಹಿಸುತ್ತಿರುವುದು ಕಂಡು ಬಂದಿರುತ್ತದೆ. ಸದರಿ ಕೆಲಸವನ್ನು ಮುಂದುವರೆಸಿಕೊಂಡು ಹೊಗುವಂತೆ ವಾರ್ಡ್ ನೊಡಲ್ ಅಧಿಕಾರಿ, ರವರು ಸೂಚಿಸಿದರು.

   ಕ್ರಮ: ಕಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು

4. ಕಾಮಾಗಾರಿ ಇಲಾಖೆಗೆ ಸಂಬಂಧಿಸಿದಂತೆ ಪಿ.ಓ.ಡ್ಲ್ಯೂ ಯೋಜನೆ ಅಡಿಯಲ್ಲಿ ಅನುಷ್ಠಾನಗೊಳಿಸಲು ಕಾಮಗಾರಿಗಳ ಪಟ್ಟಿಯನ್ನು ಸಭೆಯಲ್ಲಿ ಅನುಮೋದಿಸಲಾಯಿತು.(ರೂ.120.00ಲಕ್ಷಗಳು) ಹಾಗೂ ಹೆಚ್ಚುವರಿ 110 ಹಳ್ಳಿಗಳ ಅನುದಾನದಲ್ಲಿ ಚನ್ನಸಂದ್ರ, ಕಾಡುಗುಡಿ ಪ್ಲಾಂಟೇಷನ್, ಗ್ರಾಮಗಳಿಗೆ ನೀರು ಸರಬರಾಜು ಮತ್ತು ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಅಂದಾಜು ಪಟ್ಟಿಯನ್ನು ಸಲ್ಲಿಸಲು ವಾರ್ಡ್ ನೊಡಲ್ ಅಧಿಕಾರಿ, ರವರು ಸೂಚಿದರು.

   ಕ್ರಮ: ಸಹಾಯಕ ಅಭಿಯಂತರರು, ಕಾಡುಗುಡಿ

5. ಮುಖ್ಯ ಅಭಿಯಂತರರು, ಮಹದೇವಪುರ ವಲಯ ರವರ ನಿರ್ದೇಶನದ ಮೇರೆಗೆ ಪ್ರತಿ ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳ ನಿರ್ವಹಣೆ ಕೆಲಸವನ್ನು ಪರಿಶೀಲಿಸಲು ವರ್ಕ ಇನ್ಸ್‌ಪೆಕ್ಟರ್ ಮತ್ತು ವಾರ್ಡ್ ಅಭಿಯಂತರರು, ಪ್ರತಿ ದಿನ ಸಂಜೆ ವಾರ್ಡ್ ಪರಿವೀಕ್ಷಣೆ ಮಾಡಿ ಯಾವ ರಸ್ತೆಗಳಲ್ಲಿ ಬೀದಿ ದೀಪಗಳು ಕಾರ್ಯ ನಿರ್ವಹಿಸದೇ ಇರುವುದನ್ನು ಜಿಯೋ ಟ್ಯಾಗ್ ಪೋಟೋ ಮೂಲಕ ತಕ್ಷಣವೇ ಎಲೆಕ್ಟ್ರಿಕಲ್ ಇಂಜಿನಿಯರ್ ರವರಿಗೆ ತಿಳಿಸಲು ಸೂಚಿಸಿ, ಆ ನಂತರ ಬೀದಿ ದೀಪಗಳನ್ನು ರಿಪೇರಿ ಮಾಡಿಸಿಕೊಡಲು ವಾರ್ಡ್ ನೊಡಲ್ ಅಧಿಕಾರಿ, ರವರು ಸೂಚಿಸಿದರು.

   ಕ್ರಮ:ಸಹಾಯಕ ಅಭಿಯಂತರರು, ಮತ್ತು ವಿದ್ಯುತ್ ದೀಪಗಳ ಉಸ್ತುವಾರಿ ಇಂಜಿನಿಯರ್

Scanned by TapScanner

6. ವಾರ್ಡ್ ಮಾರ್ಷಲ್ ರವರಿಗೆ ಪ್ರತಿ ದಿನ ಮಾಸ್ಕ್ ದರಿಸದೇ ಇರುವ ಸಾರ್ವಜನಿಕರಿಗೆ ದಂಡ ವಿದಿಸುವ ಮತ್ತು ಕೋವಿಡ್ ಪರೀಕ್ಷೆಯ ತಂಡಗಳೊಂದಿಗೆ ಕಾರ್ಯ ನಿರ್ವಹಿಸಲು ವಾರ್ಡ್ ನೊಡಲ್ ಅಧಿಕಾರಿ. ರವರು ಸೂಚಿಸಿದರು.

ಕ್ರಮ: ಕಿರಿಯ ಆರೋಗ್ಯ ಪರಿವೀಕ್ಷಕರು

**<u>Important instruction for todays Ward Committee meeting</u>**

**7. As per Hon'ble Administration Direction in todays ward Committee meeting the Heath Inspector shell read out the solid waste Collection vehicle details as assigned to respective blocks in the ward and explain about the collection timings of dry waste, & wet waste sanitary waste Regards special Commissioner SWM**

8. ಮಾನ್ಯ ಆಡಳಿತಾಧಿಕಾರಿ ರವರ ಆದೇಶದಂತೆ ಇಂದಿನ ವಾರ್ಡ್ ಸಭೆಯಲ್ಲಿ ಹಾಜರಿದ್ದ ಹಿರಿಯ ಆರೋಗ್ಯ ಪರಿವೀಕ್ಷಕರು, ಘನ ತ್ಯಾಜ್ಯ ಪರಿವೀಕ್ಷಕರವರು ಕಾಡುಗುಡಿ ವಾರ್ಡ್ ನಂ: 83 ರಲ್ಲಿ ಒಟ್ಟು 27 ಆಟೋ ಟಿಪ್ಪರ್‌ಗಳು ಇದ್ದು, 3 ಕಾಂಪ್ಯಾಕ್ಟರ್‌ಗಳು ಘನತ್ಯಾಜ್ಯ ನಿರ್ವಹಣಾ ಕಾರ್ಯವನ್ನು ನಿರ್ವಹಿಸುತ್ತಿರುತ್ತಾರೆಂದು ಸಭೆಯಲ್ಲಿ ತಿಳಿಸಿದರು, ಹಾಗೂ ಒಟ್ಟು 27 ಆಟೋಗಳಿಗೆ 750 ಮನೆಗಳಿಗೆ ಒಂದು ಬ್ಲಾಕ್‌ನಂತೆ ಒಟ್ಟು 27 ನಿಗಧಿಪಡಿಸಲಾಗಿದ್ದು, ಅದರಂತೆ ಪ್ರತಿ ಬೆಳ್ಳಗೆ. 07ಘಂಟೆ ಯಿಂದ ಪ್ರಾರಂಬಿಸಿ ಬೆಳ್ಳಿಗೆ 10 ಘಂಟೆಯ ವರೆಗೆ ಪ್ರತಿ ಮನೆಯಿಂದಲೂ ಸಂಗ್ರಹಿಸುತ್ತಿರುವುದಾಗಿ ತಿಳಿಸಿರುತ್ತಾರೆ. ಹಾಗೂ ಆಟೋಗಳ ಮೂಲಕ ಕಸ ವಿಂಗಡಿಸಲು ಅರಿವು ಮೂಡಿಸಲು ಅನ್ನೌಮೆಂಟ್ ಮಾಡಿಸುತ್ತಿದ್ದು, ಇದು ತಪಾಸಣೆ ವೇಳೆಯಲ್ಲಿಯೂ ಕೂಡ ಕಂಡು ಬಂದಿರುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ. ತದ ನಂತರ ಎರಡನೇ ಪಾಳಿಯಲ್ಲಿ ಮನಃ ಸದರಿ 27 ಆಟೋಗಳು ಬ್ಲಾಕ್‌ವಾರು ರೋಡ್ ಮ್ಯಾಪ್‌ನಂತೆ ಒಣತ್ಯಾಜ್ಯವನ್ನು ಸಂಗ್ರಹಿಸುತ್ತಿದ್ದು, ಅದರೊಂದಿಗೆ ಇತರೆ ನಿರ್ದೇಶಿತ ಘನತ್ಯಾಜ್ಯ ನಿರ್ವಹಣಾ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ.

9. ಕಾಡುಗುಡಿ ವ್ಯಾಪ್ತಿಯಲ್ಲಿ ಬಿ.ಡ್ಲ್ಯೂ.ಎಸ್.ಎಸ್.ಬಿ ಇಲಾಖೆಯ ವತಿಯಿಂದ ಅಗೆದಿರುವ ರಸ್ತೆಯನ್ನು ಸರಿಯಾಗಿ ಮುಚ್ಚದೇ ಮಣ್ಣನ್ನು ರಸ್ತೆಯಲ್ಲಿ ಬಿಟ್ಟು ಸಾರ್ವಜನಿಕರಿಗೆ ತೊಂದರೇಯಾಗುತ್ತಿರುವುದಾಗಿ ಕೋರಿ ರಸ್ತೆಗಳನ್ನು ಸರಿ ಪಡಿಸಲು ಸಾರ್ವಜನಿಕರು ಕೋರಿದರು. ಆದರಂತೆ ಸಹಾಯಕ ಅಭಿಯಂತರರು, ಬಿ.ಡ್ಲ್ಯೂ.ಎಸ್.ಎಸ್.ಬಿ ರವರು ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

ಕ್ರಮ: ಸ.ಕಾ.ಅ ಬಿ.ಡ್ಲ್ಯೂ.ಎಸ್.ಎಸ್.ಬಿ

10. ವಾರ್ಡ್ ವ್ಯಾಪ್ತಿಯಲ್ಲಿ ಬಾಡಿಗೆ/ಶಾಲಾ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳಿಗೆ ನಿವೇಶನವನ್ನು ಒದಗಿ ಕೊಡಲು ಕೋರಿ. ಪತ್ರದೊಂದಿಗೆ ಅಂಗನವಾಡಿ ಶಾಲಾ ಶಿಕ್ಷಕಿರವರು ಕೋರಿದರು. ಅದರಂತೆ ಸದರಿ ಪತ್ರವನ್ನು ನೊಡಲ್ ಅಧಿಕಾರಿ ರವರು ಸಹಾಯಕ ಕಂದಾಯ ಅದಿಕಾರಿಗಳು ವೈಟ್‌ಫೀಲ್ಡ್ ಉಪ ವಿಬಾಗ ರವರಿಗೆ ಪರಿಶೀಲನೆ ಮಾಡಿ ಕಡತದೊಂದಿಗೆ ವರದಿ ಮಂಡಿಸಲು ಸೂಚಿದರು.

ಕ್ರಮ: ಸಹಾಯಕ ಕಂದಾಯ ಅಧಿಕಾರಿ, ವೈಟ್‌ಫೀಲ್ಡ್ ಉಪವಿಬಾಗ

Scanned by TapScanner

ವಾರ್ಡ್ ಕಮಿಟಿ ಸದಸ್ಯರು ಹಾಗೂ ಸಾರ್ವಜನಿಕರು, ಅಧಿಕಾರಿ ನೌಕರರು ಹಾಗೂ ಪಧಾಧಿಕಾರಿಗಳು ಈ ಮೇಲ್ಕಂಡಂತೆ ತಿಳಿಸಿರುವ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಹಾಗೂ ನಿರ್ಣಯಗಳಂತೆ ಕಾಡುಗುಡಿ ವಾರ್ಡ್ ನಂ: 83 ರ ವ್ಯಾಪ್ತಿಯಲ್ಲಿ ಕೆಲಸ ಕಾರ್ಯಗಳನ್ನು ಅಧ್ಯತೆ ಮೇರೆಗೆ ನಿರ್ವಹಿಸಲು ಸೂಚಿಸಲಾಯಿತು,

ಕಾಡುಗುಡಿ ವಾರ್ಡ ನಂ: 83 ರ ವಾರ್ಡ್ ಕಮಿಟಿಯ ಕಾರ್ಯದರ್ಶಿಯವರಾದ ಶ್ರೀ.ಸುರೇಂದ್ರ ಕುಮಾರ್, ಕಿರಿಯ ಅಭಿಯಂತರರು, ರವರು ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಕಾರ್ಯನಿರ್ವಹಿಸಲು ಕೋರುತ್ತಾ, ವಂದನಾರ್ಪಣೆಯನ್ನು ಸಲ್ಲಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು,

**ವಾರ್ಡ್ ಕಮಿಟಿ ಕಾರ್ಯದರ್ಶಿ** 21/11/2020.
**ವಾರ್ಡ್ ನಂ: 83 ಕಾಡುಗುಡಿ**

**ಪ್ರತಿಯನ್ನು**

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಎಲ್ಲಾ ಸದಸ್ಯರುಗಳಿಗೆ ಮಾಹಿತಿಗಾಗಿ

Scanned by TapScanner